# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ

## ಪ್ರಕರಣ ಸಂಖ್ಯೆ: ಎಸ್.ಸಿ. ನಂ.80/2025

Pw-02

Cw-04

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀ ಉಮೇಶ ಚೌಡಣ್ಣನವರ |
| ತಂದೆ:ಗಂಡನ ಹೆಸರುಃ | ಶ್ರೀ ಬೀರಪ್ಪ |
| ವಯಸ್ಸುಃ | 34 ವರ್ಷ |
| ಉದ್ಯೋಗಃ | ವ್ಯವಸಾಯ |
| ವಾಸ ಸ್ಥಳಃ | ಹಾರೋಗೊಪ್ಪ ತಾಃ ರಾಣೇಬೆನ್ನೂರು |

**ದಿನಾಂಕ:10.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

1. ಚಾಸಾ-1 ನನ್ನ ಹೆಂಡತಿ. ಚಾಸಾ-5 ನನ್ನ ತಂದೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಪರಿಚಯ ಇರುತ್ತಾರೆ. ಅವರು ನಮ್ಮೂರಿನವರು. ಈಗ್ಗೆ 11 ತಿಂಗಳ ಹಿಂದೆ ನನ್ನ ಚಿಕ್ಕಪ್ಪನ ಮಗ ಬಸವರಾಜ ಚಿತ್ರದುರ್ಗದಿಂದ ಲಕ್ಷ್ಮಿ ಎಂಬ ಹುಡುಗಿಯನ್ನು ಮದುವೆ ಮಾಡಿಕೊಳ್ಳುವ ಸಲುವಾಗಿ ಕರೆದುಕೊಂಡು ಬಂದಿದ್ದನು. ಆರೋಪಿತರಿಗೂ ಸದರಿ ಲಕ್ಷ್ಮೀ ರವರಿಗೂ ಯಾವುದೇ ಸಂಬಂಧ ಇಲ್ಲ. ಆರೋಪಿತರು ನನಗೆ ಸಂಬಂಧಿಕರಲ್ಲ. ಆಗ ಚಿತ್ರದುರ್ಗದಿಂದ ಸದರಿ ಹುಡುಗಿಯ ತಂದೆ, ತಾಯಿ ಆಕೆಯನ್ನು ಕರೆದುಕೊಂಡು ಹೋಗಲು ನಮ್ಮೂರಿಗೆ ಬಂದಿದ್ದರು. ಆಗ ಬಸವರಾಜನ ಕಡೆಯವರಿಗೂ ಮತ್ತು ಲಕ್ಷ್ಮೀಯ ಕಡೆಯವರೆಗೂ ಜಗಳ ಆಗುತ್ತಿತ್ತು. ಆಗ ಮನೆಯಲ್ಲಿದ್ದ ನಾನು ಜಗಳದ ಶಬ್ದ ಕೇಳಿ ಸ್ಥಳಕ್ಕೆ ಹೋದೆನು. ನಂತರ ಆರೋಪಿತರೂ ಸಹ ಸದರಿ ಜಗಳ ಆಗುತ್ತಿದ್ದ ಸ್ಥಳಕ್ಕೆ ಬಂದರು.

2. ನಾನು ಸದರಿ ಬಸವರಾಜು ಈತನಿಗೆ ಈ ರೀತಿ ಕೆಟ್ಟ ಕೆಲಸ ಮಾಡಬಾರದು ಎಂದು ಬುದ್ದಿವಾದ ಹೇಳಿ ಸದರಿ ಹುಡುಗಿಯನ್ನು ಆಕೆಯ ತಂದೆ, ತಾಯಿ ಜೊತೆ ಚಿತ್ರದುರ್ಗಕ್ಕೆ ಕಳಿಸಿಕೊಟ್ಟೆನು. ಆಗ 1 ನೇ ಆರೋಪಿ ನನ್ನನ್ನು ಕುರಿತು ನೀನು 1 ನೇ ಹಾದರಗಿತ್ತಿಯಾಗಿದ್ದೀಯಾ ಎಂದು ಬೈದನು. ಆಗ ನಾನು 1 ನೇ ಆರೋಪಿಗೆ ನಾನೇನು ಕೆಟ್ಟ

ಕೆಲಸ ಮಾಡಿಲ್ಲ, ಒಳ್ಳೆ ಕೆಲಸ ಮಾಡಿದ್ದೇನೆಂದು ಹೇಳಿದೆನು. ಆಗ ಆರೋಪಿತರು ನೀನೇ ಸರಿ ಇಲ್ಲ, ನೀನೇನು ಪಂಚಾಯತಿ ಮಾಡುತ್ತೀಯಾ ಎಂದು ನನಗೆ ಬೈದರು. ಆಗ ನನಗೆ ಕೋಪ ಬಂತು. ಆಗ ನಾನು ನಾನೇನು ಈ ರೀತಿ ಬುದ್ದಿವಾದ ಹೇಳಿ ಹುಡುಗಿಯನ್ನು ಕಳುಹಿಸಿಕೊಡಬಾರದಿತ್ತಾ ಎಂದು ಆರೋಪಿತರಿಗೆ ಕೇಳಿದೆನು. ಆಗ ಆರೋಪಿತರು ನನ್ನನ್ನು ಹಿಡಿದುಕೊಂಡು ಹೊಡೆದರು. ನಂತರ ನಾನು ಮನೆಗೆ ಹೋದೆನು.

3. ನಂತರ ಸಂಜೆ 7.30 ಗಂಟೆಗೆ ನಮ್ಮ ಮನೆ ಕಡೆಯಿಂದ ಆಂಜನೇಯ ದೇವಸ್ಥಾನದ ಕಡೆಗೆ ಹೋಗುತ್ತಿದ್ದೆನು. ಭರಮಪ್ಪನು ಆಂಜನೇಯ ದೇವಸ್ಥಾನದ ಹತ್ತಿರ ಇದ್ದನು. ಆಗ ನಾನು ಭರಮಪ್ಪನಿಗೆ ನನಗೇಕೆ ಬೈದು, ಅವಮಾನಮಾಡಿದೆ ಎಂದು ಕೇಳಿದೆ. ಆಗ ಭರಮಪ್ಪನು ಈಗ ಏನು ಎಂದು ಹೇಳಿ ನನ್ನ ಕುತ್ತಿಗೆ ಹಿಡಿದುಕೊಂಡು ಹಿಚುಕಿದರು. ಆಗ ನನ್ನ ಹೆಂಡತಿ ಮತ್ತು ನನ್ನ ತಾಯಿ ಅಲ್ಲಿಗೆ ಬಂದು ನನ್ನನ್ನು ಆರೋಪಿಯಿಂದ ಬಿಡಿಸಿಕೊಂಡು ಮನೆಗೆ ಕರೆದುಕೊಂಡು ಹೋದರು.

4. ಆಗ ಉಳಿದ ಆರೋಪಿಗಳಾದ ಪ್ರಕಾಶ, ರವಿ, ಅಭಿಷೇಕ, ಪ್ರವೀಣ, ನವೀನ, ಚಂದ್ರಪ್ಪ ಇವರು ನಮ್ಮ ಮನೆಗೆ ಬಂದು ನನಗೆ ಹಿಡಿದುಕೊಂಡು ಹೊಡೆದರು. ಅಷ್ಟರಲ್ಲಿ ಊರಿನ ಜನ ಬಂದು ಜಗಳ ಬಿಡಿಸಿಕೊಂಡು ಬೇರೆ ಮನೆಗೆ ಕರೆದುಕೊಂಡು ಹೋದರು. ಘಟನೆ ಬಗ್ಗೆ ನನ್ನ ಹೆಂಡತಿ ಸದರಿ ಆರೋಪಿಗಳ ಮೇಲೆ ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತಾರೆ. ನನ್ನನ್ನು ಹಿಡಿದುಕೊಂಡು ಬೈದು, ಹಲ್ಲೆ ಮಾಡಿದ ಆರೋಪಿತರನ್ನು ಪುನಃ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳಾದ ಭರಮಪ್ಪ, ಪ್ರಕಾಶ, ರವಿಯಣ್ಣ, ಚಂದ್ರಪ್ಪ ಇವರನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿಗಳಾದ ನವೀನ, ಅಭಿಷೇಕ, ಪ್ರವೀಣ ಇವರನ್ನು ನೋಡಿದರೆ ಗುರುತಿಸಬಲ್ಲೆ.

ಈ ಹಂತದಲ್ಲಿ ವಿಶೇಷ ಅಭಿಯೋಜಕರು ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.